ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-01

ಸಂಖ್ಯೆ:ಪಿಎಸ್ಸಿ ಇ(1) 2193/2020-21 ದಿನಾಂಕ:07-08-2020

## :: ಪತ್ರಿಕಾ ಪ್ರಕಟಣೆ ::

2017-18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸಿರುವ ಅಂಧ/ದೃಷ್ಟಿಮಾಂದ್ಯ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆಯನ್ನು ಬೆಂಗಳೂರು, ಮೈಸೂರು, ಕಲಬುರ್ಗಿ ಮತ್ತು ಶಿವಮೊಗ್ಗ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುತ್ತಿದ್ದು, ಅಭ್ಯರ್ಥಿಗಳು ವೈದ್ಯಕೀಯ ಪರೀಕ್ಷೆಗೆ ಕೆಳಕಂಡ ಸೂಚನೆಗಳಂತೆ ಹಾಜರಾಗುವಂತೆ ತಿಳಿಸುತ್ತಾ ಸೂಚನಾ ಪತ್ರಗಳನ್ನು ಈಗಾಗಲೇ ರವಾನಿಸಲಾಗಿರುತ್ತದೆ. ಈ ಸಂಬಂಧ ಅಭ್ಯರ್ಥಿಗಳು ತಪಾಸಣೆಗೆ ಹಾಜರಾಗಬೇಕಿರುವ ಸ್ಥಳ ಮತ್ತು ದಿನಾಂಕದ ಮಾಹಿತಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಸೂಚನೆ:-i) ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ತಪಾಸಣೆಯ ಸಮಯದಲ್ಲಿ ಸಲ್ಲಿಸತಕ್ಕದ್ದು.

ii) ವೈದ್ಯಕೀಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗೆ ಯಾವುದೇ ಪ್ರಯಾಣ ಭತ್ಯೆ/ ದಿನಭತ್ಯೆ ನೀಡಲಾಗುವುದಿಲ್ಲ.

iii) ವೈದ್ಯಕೀಯ ಪರೀಕ್ಷೆಗೆ ಹಾಜರಾದಾಗ ಆಸ್ಪತ್ರೆಯಲ್ಲಿ ನಿಗದಿತ ಶುಲ್ಕವನ್ನು ಪಾವತಿಸಿ ಓಪಿಡಿ ಪುಸ್ತಕವನ್ನು ತಪ್ಪದೇ ಪಡೆದುಕೊಳ್ಳತಕ್ಕದ್ದು.

iv) ಅಭ್ಯರ್ಥಿಗಳು ತಪಾಸಣಾ ಕೇಂದ್ರಕ್ಕೆ ಕಡ್ಡಾಯವಾಗಿ ಮಾಸ್ಕ್ ಧರಿಸಿ ಬರತಕ್ಕದ್ದು.

v) ಅಭ್ಯರ್ಥಿಗಳು ಹಿಂದಿನ ದಿನ **Rapid Antigen Test** ಮಾಡಿಸಿಕೊಂಡು ವರದಿಯೊಂದಿಗೆ ವೈದ್ಯಕೀಯ ತಪಾಸಣೆಗೆ ಹಾಜರಾಗತಕ್ಕದ್ದು.

C Leelavathi

(ಸಿ.ಎಲ್.ಲೀಲಾವತಿ)
ಸಹಾಯಕ ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.